ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 24-35
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

# ‘ಎಮ್ಮೆ ಬಸವ’ ಬಿರುದಾಂಕಿತ ಲಿಂಗರಾಜೇಂದ್ರನ ಚರಿತ್ರೆ

**ಡಾ. ರಾಮರೆಡ್ಡಿ ಎಸ್. ರಡ್ಡೇರ.***

*ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಆರ್.ಟಿ.ಇ.ಎಸ್ ಪದವಿ ಕಾಲೇಜು,
ರಾಣೇಬೆನ್ನೂರು, ಹಾವೇರಿ–ಜಿಲ್ಲೆ.

***Abstract:***

*ಕನ್ನಡ ಕಾಲಜ್ಞಾನ ಸಾಹಿತ್ಯವು ಶಿವಶರಣರು ನೀಡಿದ ಅಮೂಲ್ಯ ಕೊಡುಗೆಯಾಗಿದೆ. ದೇಶೀಯ ಚರಿತ್ರೆಯಲ್ಲಿ ಉಂಟಾಗಬಹುದಾದ ಸಾಂಸ್ಕೃತಿಕ ಪಲ್ಲಟದ ಸಂಗತಿಗಳನ್ನು ಸಾಹಿತ್ಯಿಕ ಪರಿಭಾಷೆಯಲ್ಲಿ ನಿರೂಪಿಸುವ ವಿಶಿಷ್ಟ ಪರಿಕ್ರಮವೇ ಕಾಲಜ್ಞಾನ ಸಾಹಿತ್ಯ. ಹನ್ನೆರಡನೆಯ ಶತಮಾನದಲ್ಲಿದ್ದ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಘಟ್ಟಿವಾಳಯ್ಯ ಮುಂತಾದ ಶರಣರು ತಮ್ಮ ವಚನ ಸಾಹಿತ್ಯದಲ್ಲಿ ಕಾಲಜ್ಞಾನವನ್ನು ನಿರೂಪಿಸಿದ್ದರು. ಇವರ ನಂತರದಲ್ಲಿ ಸುಮಾರು ನಾಲ್ಕು ಶತಮಾನಗಳ ಕಾಲದವರೆಗೆ ಈ ಸಾಹಿತ್ಯವು ತಟಸ್ಥವಾಗಿ ಉಳಿಯುತ್ತದೆ. ಇದು ಮತ್ತೆ ಕನ್ನಡ ಸಾಹಿತ್ಯದಲ್ಲಿ ಗೋಚರಿಸಿದ್ದು ಕ್ರಿ.ಶ.16ನೆಯ ಶತಮಾನದಲ್ಲಿ; ಅದೂ ಮತ್ತೆ ಶಿವಶರಣರರಿಂದಲೇ ಎಂಬುದು ವಿಶೇಷವೆನಿಸುತ್ತದೆ. ಪ್ರಸ್ತುತ ಲೇಖನದಲ್ಲಿ ತಮಿಳುನಾಡಿನಿಂದ ಕನ್ನಡ ನಾಡಿಗೆ ಬಂದ ‘ಎಮ್ಮೆ ಬಸವ’ ಬಿರುದಾಂಕಿತ ಲಿಂಗರಾಜೇಂದ್ರ ಎಂಬ ಶರಣನ ಚಾರಿತ್ರಿಕ ಸಂಗತಿಯನ್ನು ವಿಶ್ಲೇಷಿಸಲಾಗಿದೆ.*

**Keywords:** *ಲಿಂಗರಾಜೇಂದ್ರ, ಎಮ್ಮೆ ಬಸವ, ಕಾಲಜ್ಞಾನ, ಕನ್ನಡ ಸಾಹಿತ್ಯ.*

## ಪೀಠಿಕೆ

ಕಾಲಜ್ಞಾನ ಸಾಹಿತ್ಯಕ್ಕೂ ಶಿವಶರಣರಿಗೂ ಇರುವ ಸಂಬಂಧಕ್ಕೆ ಮುಖ್ಯ ಕಾರಣವೆಂದರೆ, ಅವರ ಕ್ರಾಂತಿಕಾರಿಯಾದ ನಿಷ್ಠುರ ಮನೋಭಾವ ಎನ್ನಬಹುದು. ‘ಲೋಕವಿರೋಧಿ ಶರಣ ಆರಿಗಂಜುವನಲ್ಲ’ ಎಂಬ ಬಸವಣ್ಣನವರ ವಚನವಾಕ್ಯವು ಈ ಮಾತಿಗೆ ಸಾಕ್ಷಿ ಎನ್ನಬಹುದು. ಕ್ರಿ.ಶ.೧೬ನೆಯ ಶತಮಾನದಲ್ಲಿದ್ದ **‘ಎಮ್ಮೆ ಬಸವ’ ಬಿರುದಾಂಕಿತ ಲಿಂಗರಾಜೇಂದ್ರ**–ಎಂಬ ಶರಣನು ತಮಿಳುನಾಡಿನ ಕುಂಭಕೋಣದಲ್ಲಿದ್ದ ತನ್ನ ಅಧಿಪತ್ಯದ ಮಠವನ್ನೂ, ದೇವಸ್ಥಾನಗಳನ್ನು ಪ್ರಾಯಶಃ ನಿಷ್ಠುರಭಾವ ಕಾರಣದಿಂದ ತ್ಯಜಿಸಿ, ಕನ್ನಡನಾಡಿಗೆ ಬಂದು ಕಾಲಜ್ಞಾನಿಯಾಗಿ ಮೆರೆದಿರುವುದು ಚಾರಿತ್ರಿಕ ಸಂಗತಿಯಾಗಿದೆ. ಈತ ಕೊಡೆಕಲ್ಲ ಬಸವನಿಗೆ ಹಿರಿಯ ಸಮಕಾಲೀನನಾಗಿ, ಕೊಡೇಕಲ್ಲ ಸಾಹಿತ್ಯ ಪರಂಪರೆಗೆ ಸೇರಿದವನಾಗಿಯೂ ಕಂಡುಬರುತ್ತಿರವುದು ಕುತೂಹಲಕರ ಸಂಗತಿಯಾಗಿದೆ.

## ಎಮ್ಮೆ ಬಸವ ಬಿರುದಾಂಕಿತ ಲಿಂಗರಾಜೇಂದ್ರನ ಜೀವನ ಸಂಗತಿಗಳು

ಕನ್ನಡ ಸಾಹಿತ್ಯದಲ್ಲಿ ‘ಎಮ್ಮೆ ಬಸವ’, ‘ಎಮ್ಮೆ ಬಸವೇಂದ್ರ’, ‘ಎಮ್ಮೆ ಬಸವರಾಜ’, ‘ಎಮ್ಮೆ ಬಸವಣ್ಣಯ್ಯ’, ‘ಎಮ್ಮೆ ಬಸಪ್ಪತಾತ’,[1] ಎಂದು ಖ್ಯಾತಿ ಗಳಿಸಿರುವ ಈ ಶರಣನ ನಿಜನಾಮ ‘ಲಿಂಗರಾಜೇಂದ್ರ’,[2] ಈತನ ಮೂಲಸ್ಥಳ ತಮಿಳುನಾಡಿನ ಕುಂಭಕೋಣ; ಈ ಶರಣನು ಕುಂಭಕೋಣದ ಮಠಾಧಿಪತಿ ಮತ್ತು ಅಲ್ಲಿನ ಸಕಲ ದೇವಸ್ಥಾನಗಳ ಅಧಿಪತಿಯಾಗಿದ್ದ.[3] ಐತಿಹಾಸಿಕ ದಾಖಲೆಗಳು

***Please cite this article as:*** ರಾಮರೆಡ್ಡಿ ಎಸ್. ರಡ್ಡೇರ. (2022). ‘ಎಮ್ಮೆ ಬಸವ’ ಬಿರುದಾಂಕಿತ ಲಿಂಗರಾಜೇಂದ್ರನ ಚರಿತ್ರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(3), 24–35.

ನಿರೂಪಿಸುವಂತೆ ಈತ ಜಂಬುಲಿಂಗೇಶ್ವರನ ಪರಮ ಆರಾಧಕ; ಪ್ರಸಿದ್ಧ ವೀರಶೈವ ತತ್ವಜ್ಞಾನಿ; ಸತ್ಯಸನ್ಮಾರ್ಗಿ; ತೇಜೋಮಯಿ; ಕಾಲಜ್ಞಾನಿ; ಸುಜನಪ್ರೇಮ ಸನ್ಮಾನಿತ; ರಾಜಪುರೋಹಿತ ಶರಣ[4]– ಎಂಬ ಇವು ಗಮನಾರ್ಹ ಸಂಗತಿಗಳಾಗಿವೆ.

ಲಿಂಗರಾಜೇಂದ್ರರ ಸಮಕಾಲೀನರಾಗಿದ್ದ ವೈದಿಕಧರ್ಮದ ಮಾಧ್ವ ಪರಂಪರೆಯ ದ್ವೈತ ಸಿದ್ಧಾಂತದ ಪ್ರತಿಪಾದಕರೂ, ಸಂಸ್ಕೃತ ಪಂಡಿತರೂ ಆಗಿದ್ದ ಶ್ರೀ ವಿಜಯೀಂದ್ರರು ಧಾರ್ಮಿಕ ಪಣವಾದದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರು. ಅವರೊಂದಿಗೆ ಹನ್ನೊಂದು ದಿಗಳವರೆಗೆ ಧಾರ್ಮಿಕ ಸಂವಾದದಲ್ಲಿ ಭಾಗವಹಿಸಿದ್ದ ಶರಣ ಲಿಂಗರಾಜೇಂದ್ರನು ತನ್ನ ತತ್ವಜ್ಞಾನದ ಬಲದಿಂದ ಸಂವಾದ ನಡೆಸುತ್ತಾನೆ. ಕೊನೆಗೆ ಅಲ್ಲಿ ನೇಮಿಸಲಾಗಿದ್ದ ಮಧ್ಯಸ್ಥಗಾರರು ಲಿಂಗರಾಜೇಂದ್ರರು ಪರಾಜಿತರಾದರೆಂದು ತೀರ್ಮಾನ ನೀಡುತ್ತಾರೆ. ಧಾರ್ಮಿಕ ಪಣವಾದದ ಆರಂಭದಲ್ಲಿ ಲಿಂಗರಾಜೇಂದ್ರ ಶರಣನು 'ವಾದದಲ್ಲಿ ನಾವು ಪರಾಜಿತರಾದರೆ, ನಮ್ಮ ಮಠವನ್ನೂ ಗದ್ದುಗೆಯನ್ನೂ ಮತ್ತು ಸರ್ವದೇವಾಲಯಾಧಿಪತ್ಯವನ್ನೂ ನಿಮಗೆ ಒಪ್ಪಿಸಿ ಗ್ರಾಮವನ್ನು ತ್ಯಜಿಸಿ ಹೋಗುತ್ತೇವೆ"[5] ಎಂದು ಪ್ರತಿಜ್ಞೆ ಗೈದಿದ್ದರೆಂದು ವೈದಿಕ ಸಾಹಿತ್ಯದಲ್ಲಿ ನಿರೂಪಿತವಾಗಿದೆ. ಆದರೆ ಬಹುದೊಡ್ಡ ಮಹಿಮಾನ್ವಿತ ಶರಣನೂ, ಸಾತ್ವಿಕ ವೀರಶೈವ ತತ್ವಜ್ಞಾನಿಯೂ ಆಗಿದ್ದ ಲಿಂಗರಾಜೇಂದ್ರ ಇಂಥ ಪಣವಾದ ಮತ್ತು ಪ್ರತಿಜ್ಞೆ ಗೈಯ್ಯುವುದು ಸಾಧ್ಯವೇ? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಕುರಿತು ಎಮ್ಮೆ ಬಸವನ ಕಾಲಜ್ಞಾನದಲ್ಲಿ ಹಲವು ಸಾಹಿತ್ಯಿಕ ಅಭಿವ್ಯಕ್ತಿಗಳು ಇರುವುದು ಕಂಡುಬರುತ್ತದೆ. ಎಮ್ಮೆ ಬಸವನ 'ಹಾಕೆಲೊ ಮುಂಡಿಗೆಯ'ಕಾಲಜ್ಞಾನದಲ್ಲಿ ಬರುವ–

***"ಬಾಜಿಗನೆಂಬುವ ರಾಜರ ಗುರುವಿಗೆ ಹಾಕೆಲೊ ಮುಂಡಿಗೆಯ । ಅಯ್ಯ***
***ಅಚ್ಯುತರಾಯನ ಅರಮನೆಯೊಳಗೆಲ್ಲ ಹಾಕೆಲೊ ಮುಂಡಿಗೆಯ ॥***

***"ಕಂಭಸೂತ್ರವ ದೊರೆಜನ ನುಂಗೀತು ಹಾಕೆಲೊ ಮುಂಡಿಗೆಯ । ಅಯ್ಯ***
***ಕುಂಭಕೋಣೆಯಲ್ಲಿ ಕುರಿಕೋಣ ಬಿದ್ದಾವು ಹಾಕೆಲೊ ಮುಂಡಿಗೆಯ ॥"***

***"ಸಾದು ಶರಣರ ಕಂಡರೆ ಈ ನರಕರೆಲ್ಲ ತಥ್ಯಮಿಥ್ಯವ ಮಾಡ್ಯರು ಹಾಕೆಲೊ ಮುಂಡಿಗೆಯ ।***
***ವಾದಿಮೂಳರಿನ್ನು ಕಾದಾಡಿ ದಣಿದಾರು ಹೋದಾರು ಯಮಪುರಕೆ ಹಾಕೆಲೊ ಮುಂಡಿಗೆಯ ॥***

***ಶೃಂಗಾರವಳಿದಿತ್ತು ಸಿರಿ ಮತ್ತೆ ತೊಲಗೀತು ಹಾಕೆಲೊ ಮುಂಡಿಗೆ । ಅಯ್ಯ***
***ಮಂಗ ಹೋಗಿ ಮೈಲಾರನ ನುಂಗಿತ್ತು ಹಾಕೆಲೊ ಮುಂಡಿಗೆಯ ॥"[6]***

ಎಂಬ ಅಭಿವ್ಯಕ್ತಿಯಲ್ಲಿ ಈ ರೀತಿಯ ಪಣವಾದವನ್ನು ಮೋಸದ್ದು ಎಂದು ಅಲ್ಲಗಳೆಯುತ್ತಿರುವಂತೆ ತೋರುತ್ತದೆ. ಮೇಲಿನ ಸಾಲುಗಳಲ್ಲಿ ಬರುವ 'ಬಾಜಿಗನೆಂಬುವ ರಾಜರ ಗುರು'ವೆಂದು ವಿಜಯೀಂದ್ರರನ್ನು ಸೂಚ್ಯವಾಗಿ ಅಭಿವ್ಯಕ್ತಿಸಿರುವಂತೆ ತೋರುತ್ತದೆ. ಇದೊಂದು ದುರುದ್ಧೇಶಿತ ಜೂಜು(ಪಣ) ಎಂದೂ; ಇಲ್ಲಿನ 'ಕಂಭಸೂತ್ರವ ದೊರೆಜನ ನುಂಗೀತು', 'ಸಾದು ಶರಣರ ಕಂಡರೆ ಈ ನರರೆಲ್ಲ ತಥ್ಯಮಿತ್ಯವ ಮಾಡ್ಯಾರು'–ಈ ಮುಂತಾದ ವಾಕ್ಯಗಳಲ್ಲಿ ವ್ಯಕ್ತವಾಗಿರುವ ಭಾವದಲ್ಲಿ 'ಕುಂಭಕೋಣದಿಂದ ವೀರಶೈವ ಶರಣರನ್ನು ಹೊರಗೆ ಹಾಕುವ ದುರುದ್ಧೇಶದ ಕುತಂತ್ರ' ಎಂಬ ಅಭಿವ್ಯಕ್ತಿ ಇರುವುದು ಕಂಡುಬರುತ್ತದೆ. ಈ ಕುತಂತ್ರವು ರಾಜರು ಮತ್ತು ಅವರ ಗುರುಗಳಾದ ಪರವಾದಿಗಳ ನಿಗೂಢ ಒಪ್ಪಂದವೆಂಬ ಸುಪ್ತ ಅಭಿವ್ಯಕ್ತಿಯೂ ಈ ಕಾಲಜ್ಞಾನದ ಗೂಢಾರ್ಥದಲ್ಲಿ

ಅಡಗಿರುವಂತಿದೆ. ರಾಜಪುರೋಹಿತರಾಗಿ ಗೌರವಿಸಲ್ಪಟ್ಟ ಶರಣರು ಅದೇ ವಂಶದ ರಾಜರಿಂದ ಊರು-ಮಠಮನ್ಯವನ್ನೆಲ್ಲ ಬಿಟ್ಟು ಅನಮಾನಿತರಾಗಿ ಹೋಗುವಲ್ಲಿ ರಾಜರು ಮತ್ತು ಅವರ ಗುರುಗಳು ಹೆಣೆದ ತಂತ್ರ-ಕುತಂತ್ರಗಳು ಮನವರಿಕೆಯಾಗುತ್ತವೆ. 'ಎಚ್ಚರಿಕೆ ಎಚ್ಚರಿಕೆ' ಎಂಬ ಎಮ್ಮೆ ಬಸವನ ಬೇರೊಂದು ಕಾಲಜ್ಞಾನದಲ್ಲಿ ಬರುವ–

***"ಅಂತ್ರಗಳು ಕೆಟ್ಟಾವು ಮಂತ್ರಗಳಳಿದಾವು ಎಚ್ಚರಿಕೆ ಎಚ್ಚರಿಕೆ ।***
***ತಂತ್ರಗಳು ತನತನಗೆ ಬಯಲಾಗಿ ಹೋದಾವು ಎಚ್ಚರಿಕೆ ಎಚ್ಚರಿಕೆ ॥"[7]***

ಎಂಬ ಸಾಲುಗಳು ಮತ್ತು 'ಹುಯ್ಯಲೊ ಡಂಗುರವ' ಕಾಲಜ್ಞಾನದಲ್ಲಿ ಬರುವ

***"ಗುರು ಶಿಷ್ಯರು ನ್ಯಾಯವ ತಪ್ಪಿ ನಡೆದಾರು"[8]***
***ಪರವಾದಿ ಚಲವಾದಿ ಕೂಡಿ ನಡೆದಾರು"[9]***

ಎಂಬ ಗೂಡಾರ್ಥದ ವಾಕ್ಯಗಳಲ್ಲಿ ವೈದಿಕಧರ್ಮದ ಪರವಹಿಸಿದ ರಾಜರು ಮತ್ತು ಅವರ ಗುರುಗಳು ವೀರಶೈವಧರ್ಮ ಪಲ್ಲಟಿಸುವ ಕುತಂತ್ರ ಮಾಡಿರುವುದನ್ನು ಸೂಚಿಸಲಾಗಿದೆ.

ಅಂತೂ ಕುಂಭಕೋಣದ ಜೂಜಿನ ರೂಪದ ಪಣವಾದದಲ್ಲಿ ಶರಣ ಲಿಂಗರಾಜೇಂದ್ರರು ಪರಾಜಿತರಾದರೆಂದು ಮಧ್ಯಸ್ಥಗಾರರು ತೀರ್ಪು ನೀಡಿದ ಮೇಲೆ ಪ್ರತಿಜ್ಞೆಯನ್ನು ಪಾಲಿಸಲು ಲಿಂಗರಾಜೇಂದ್ರ ಮತ್ತು ಅವರ ಧಾರ್ಮಿಕ ಅನುಯಾಯಿಗಳು ಕುಂಭಕೋಣವನ್ನು ತೊರೆದು ದೇಶಾಂತರ ಹೋಗುತ್ತಾರೆ. ಈ ಸಂದರ್ಭವನ್ನು ಕುರಿತು ವಿದ್ವಾಂಸರಾದ ಶ್ರೀ ಆರ್.ಎಸ್.ಪಂಚಮುಖಿಯವರು "ಶ್ರೀ ವಿಜಯೀಂದ್ರರು ಎಮ್ಮೆ ಬಸವರಾಜೇಂದ್ರರೆಂಬ ವೀರಶೈವ ಸನ್ಯಾಸಿಗಳನ್ನು ಪಣಬಂಧದ ವಾದದಲ್ಲಿ ಸೋಲಿಸಿ ಅವರ ಮಠವನ್ನು ತಾಮ್ರ ಶಾಸನವನ್ನು ಸ್ವಾಧೀನಪಡಿಸಿಕೊಂಡರೆಂದು ಹೇಳಿದ್ದು ಯಥಾರ್ಥವಾಗಿದೆ. ಶಕ 1464ರ ಅವರ ಶಾಸನವು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸ್ವಾಧೀನದಲ್ಲಿ ಇರುವುದೇ ಇದಕ್ಕೆ ಸಾಕ್ಷಿ. ಆ ಶೈವವಾದವು ಶಕ 1464 (ಕ್ರಿ.ಶ.1543)ರ ನಂತರ ಜರುಗಿರಬೇಕೆಂದು ತಾನೆ ಸ್ಪಷ್ಟವಾಗುತ್ತದೆ"[10] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ಚಾರಿತ್ರಿಕ ಸಂಗತಿ ಎಂಬುದು ಇದರಿಂದ ಖಚಿತಪಡುತ್ತದೆ.

ಕುತಂತ್ರಕ್ಕೆ ಬಲಿಯಾಗಿ, ಕುಂಭಕೋಣದ ಧಾರ್ಮಿಕ ಅಧಿಕಾರ ಮತ್ತು ಸ್ಥಾನಿಕ ಅಸ್ತಿತ್ವವೆರಡನ್ನೂ ಕಳೆದುಕೊಂಡ ಮೇಲೆ, ಶರಣ ಲಿಂಗರಾಜೇಂದ್ರನು ಆಪ್ತ ವೀರಶೈವಧರ್ಮದ ಮುಖಂಡರೊಂದಿಗೆ ಗುಪ್ತವಾಗಿ ಚರ್ಚಿಸಿ, ಕುಂಭಕೋಣವನ್ನು ತೊರೆದು ಕಲ್ಯಾಣದ ಹಂಬಲದೊಂದಿಗೆ ಮೈಸೂರು ದೇಶಕ್ಕೆ ಬರುತ್ತಾನೆ.[11] ಊರು ತೊರೆದು ದೇಶಾಂತರ ಹೋಗಬೇಕಾದ ಪರಸ್ಥಿತಿಯನ್ನು ಕುರಿತು ತಮ್ಮ ಕಾಲಜ್ಞಾನ ಸಾಹಿತ್ಯದಲ್ಲಿ ವ್ಯಕ್ತಪಡಿಸಿರುವ ಎಮ್ಮೆ ಬಸವನ ಆತ್ಮಸಾಕ್ಷಿಯ ಭಾವನುಡಿಗಳು ಹೀಗಿವೆ;

***"ಮಡದಿ ಮಕ್ಕಳ ತಾವು ಹೆಡಗಿ ಮರನ ಹೊತ್ತು ದುಮ್ಮಿಸಾಲಿಯೊ ।***
***ನಡೆದರು ಪಡುವಲ ಉಳುವಿಯ ದೇಶಕ್ಕೆ ದುಮ್ಮಿಸಾಲಿಯೊ ॥"[12ಎ]***
***"ಹಮ್ಮೀರ ದೊರೆಗಳು ಸುಮ್ಮಾನವಳಿದರು ।***
***ನಮ್ಮ ಹೃದಯದ ದೇವರು ದುಮ್ಮನಾದ ಮೇಲೆ । ಮುಂದೆ***
***ಸುಮ್ಮಾನವಳದಿರು ಸುಲಿಸಿಕೊಂಡವರೆಲ್ಲ । ನಮ್ಮ***
***ಎಮ್ಮೆ ಬಸವಣ್ಣ ಸಾರಿ ದೇವನಾದ ॥"***

*ಹಗೆಯದೊಳಗಣ ಭತ್ತವ ತೆಗೆದುಣ್ಣಲೀಸರು । ಬಹಳ*
*ಬಗೆ ಬಗೆಯಲಿ ಬೇಡಿ ಭಂಗ ತರುತಾರೆ । ಒಂದು*
*ಉಗುರಲಿ ಹೋಗುವುದಕೆ ಕೊಡಲಿಯ ತರುತಾರೆ । ಮುಂದೆ*
*ಜಗವೆಲ್ಲ ಹಗರಣವಾಗಿ ಭೇಯುತ್ತದೆ ॥"*[12ಬ]

*"ವಿಭೂತಿ ರುದ್ರಾಕ್ಷಿಯಿಟ್ಟಂಥ ನಡತಿಗೆ*
*ಜಾಬಗಳ ಕೇಳ್ಯಾರಣ್ಣ ।*
*ಆಪತ್ತು ಬಂದಾಗ ಆರಾರಿಗಳವಲ್ಲ*
*ನೀತಿಲೆ ಇರಬೇಕಣ್ಣ ॥*

*ಲಿಂಗದ ನಡತಿಯ ನಿಜವೆಂದು ಕೇಳ್ಯಾರು*
*ಜಂಗಮರು ಮೊದಲಾಗೆಣ್ಣ ।*
*ಪಂಗನಾಮವನಿಟ್ಟು ಜಂಗಮ ಹಳಿವು*
*ಹೆಂಗೆಂಗೆ ಮಾಡ್ಯಾರಣ್ಣ ॥"*[13]

*"ಧನಧಾನ್ಯ ಸಂಪತ್ತು ತಮ್ಮದಲ್ಲ*
*ಮನಿಮಾರು ಸತಿಸುತರು–*
*ಕನಸು ಕಂಡಂಥ ಕನ್ನಡಿಯೊಳಗಿನ ಗಂಟು*
*ದಿನಮಾನ ಕೆಟ್ಟವು ॥"*[14]

ಎಂಬ ಈ ಮೇಲಿನ ನುಡಿಗಳಲ್ಲಿ ಸಂಪತ್ತಿನ ಆಧಾರಗಳನ್ನು, ಧಾರ್ಮಿಕ ಘನತೆಯನ್ನು ಸ್ವಸ್ಥಾನದಲ್ಲಿ ಕಳೆದುಕೊಂಡ ಮೇಲೆ ಅನುಭವಿಸಿದ ಸ್ಥಿತಿಯನ್ನು ವ್ಯಕ್ತಪಡಿಸಿರುವಂತೆ ತೋರುತ್ತದೆ. ಕುಂಭಕೋಣ ತೊರೆದು ಹೋಗುವಾಗ ಶರಣರು ಮತ್ತು ಅವರ ಮಡದಿ ಮಕ್ಕಳು ಹೆಡಗೆ ಮರಗಳನ್ನು ತಲೆಮೇಲೆ ಹೊತ್ತುಕೊಂಡು ಪಶ್ಚಿಮ ದಿಕ್ಕಿನ ಉಳುವಿಯ ದೇಶದ ಕಡೆಗೆ ಉಪಜೀವನಕ್ಕಾಗಿ ಹೋದ ದಾರುಣ ಘಟನೆಯ ಚಿತ್ರಣ ಮನಮಿಡಿಯುವಂತೆ ಚಿತ್ರಿಸಲಾಗಿದೆ.

ಮುಂದೆ ದೇಶ ಸಂಚಾರದ ಸಂದರ್ಭದಲ್ಲಿ ಬಂದೊದಗಿದ ಸ್ಥಿತಿಗತಿಗಳನ್ನು ಕುರಿತು 'ಬಾಬೂಜಿ' ಎಂಬ ಕಾಲಜ್ಞಾನ ಪದ್ಯದಲ್ಲಿ ವ್ಯಕ್ತಪಡಿಸಿರುವ ಭಾವ ಹೀಗಿದೆ;

*"ಒಡವೆ ವಸ್ತುವ ನೆಲ ನಾ ಬಿಟ್ಟು ಒಡೆಯನೋಡಿಹೋಗಲು ।*
*ಅಡವಿಯ ಸುರೆ ಹೋಗಲು ಅಡವಿಯ ಗಿಡುವೆದ್ದು ಕೊಲ್ಲುತಾದೆ ॥"*[15]

ಎಂಬ ಸಾಲುಗಳಿಂದ ಒಡವೆ, ವಸ್ತ್ರ, ನೆಲವನ್ನು ಬಿಟ್ಟು ಒಡೆಯನು ಓಡಿಹೋದಾಗ ಅಡವಿಯ ಆಸರೆಯಲ್ಲಿ ಕೆಲಕಾಲ ಕಳೆದ ಕಷ್ಟದ ಪರಿಸ್ಥಿತಿಯ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿರುವಂತೆ ತೋರುತ್ತದೆ. ನಂತರ ಎಮ್ಮೆ ಬಸವನು ಕೊಟ್ಟೂರಿಗೆ ಬಂದಂತೆ ತೋರುತ್ತದೆ. ಎಮ್ಮೆ ಬಸವನ 'ಹುಯ್ಯಲೊ ಡಂಗುರವ' ಎಂಬ ಕಾಲಜ್ಞಾನದಲ್ಲಿನ–

*"ಬೇಡ ಭಕ್ತಿಯ ತಾಳು ಪಡುವಲ ದೇಶದಿ ಹುಯ್ಯಲೊ ಡಂಗುರವ । ಅಯ್ಯ*
*ಪೂಜೆಯ ಮಾಡ್ಯಾನು ಕೊಟ್ಟೂರ ಬಸವನ ಹುಯ್ಯಲೊ ಡಂಗುರವ॥"*[16]

ಎಂಬ ಸಾಲುಗಳಲ್ಲಿ ಕೊಟ್ಟೂರು ಬಸವನ ಉಲ್ಲೆಖ ಬರುತ್ತದೆ. ಪ್ರಾಯಶಃ ಎಮ್ಮೆ ಬಸವನೇ ತನ್ನನ್ನು ಕೊಟ್ಟೂರು ಬಸವನೆಂದು ಕರೆದುಕೊಂಡಿರುವಂತೆ ತೋರುತ್ತದೆ. ಕೊಟ್ಟೂರು ಐತಿಹ್ಯದ ಪ್ರಕಾರ ಕೊಟ್ಟೂರಿನ ಮೂಲ ಹೆಸರು 'ಶಿಖಾಪುರ' ಎಂದಿದೆ. ಬಸವನೆಂಬ ಶರಣನು ಲೋಕ ಸಂಚಾರ ಮಾಡುತ್ತಾ ರಾತ್ರಿಯ ಹೊತ್ತಿಗೆ ಶಿಖಾಪುರಕ್ಕೆ ಬಂದು ಅಲ್ಲಿನ ವೀರಭದ್ರಸ್ವಾಮಿಗೆ ವಸತಿಗಾಗಿ ಸ್ಥಳ ನೀಡಲು ಕೇಳಿದನಂತೆ. ವೀರಭದ್ರಸ್ವಾಮಿಯು ತಾನಿರುವ ಆಸ್ಥಾನದಲ್ಲಿಯೇ ಉಳದುಕೊಳ್ಳಲು ಅವನಿಗೆ ಸ್ಥಳವನ್ನು ಕೊಟ್ಟನಂತೆ. ಬೆಳಗಾಗುವುದರಲ್ಲಿ ಬಸವನು ಇಡೀ ಆಸ್ಥಾನವನು ಆವರಿಸಿಕೊಂಡು ವೀರಭದ್ರಸ್ವಾಮಿಗೆ ಸ್ಥಳವಿಲ್ಲದಂತೆ ಮಾಡುತ್ತಾನೆ; ಈ ಕುರಿತು ವೀರಭದ್ರಸ್ವಾಮಿಯು ಕೇಳಲಾಗಿ, ನೀವು ಕೊಟ್ಟ ಊರನ್ನು ಮರಳಿ ಕೇಳಲಾಗದು; ಒಮ್ಮೆ ಕೊಟ್ಟ ಮೇಲೆ ಮುಗಿಯಿತು; ಮರಳಿ ಕೊಡಲಾಗದೆಂದು ಹೇಳಿದನಂತೆ; ಹೀಗಾಗಿ ಈ ಊರಿಗೆ 'ಕೊಟ್ಟೂರು' ಎಂಬ ಹೆಸರು ಪ್ರಾಪ್ತವಾಯಿತೆಂದು ಹೇಳಲಾಗುತ್ತದೆ.

ಒಮ್ಮೆ ಕೊಟ್ಟೂರು ಬಸವೇಶ್ವರನು ನಿರಾಕಾರ ರೂಪನಾಗಿ ಮೊಗಲ್ ದೊರೆ ಅಕ್ಬರ ಬಾದಷಹನ ಆಸ್ಥಾನಕ್ಕೆ ಹೋಗಿ ಅಲ್ಲಿನ ಅಂತಃಪುರವನ್ನು ಪ್ರವೇಶಿಸುತ್ತಾನೆ. ಇದರಿಂದ ಕುಪಿತನಾದ ದೊರೆ ಅಕ್ಬರನು ಜಂಗಮನ ಮೇಲೆ ಖಡ್ಗವನ್ನು ಎತ್ತಲು ಹೋದಾಗ ಬಸವನ ನಿಜಮಹಿಮೆಯ ದರ್ಶನವಾಗುತ್ತದೆ. ಕೂಡಲೇ ಬಸವನ ಪಾದಕ್ಕೆ ಎರಗಿದ ಅಕ್ಬರನು ಬಸವನ ಬಗೆಗೆ ಪೂಜ್ಯ ಭಾವನೆ ತಾಳಿ ಆದರಾತಿಥ್ಯವನ್ನು ತೋರುತ್ತಾನೆ. ಅಲ್ಲಿ ಬಸವೇಶ್ವರನು ಪವಡಿಸಿದ್ದ ಮಣಿಮಂಚವನ್ನು ಭಕ್ತಿಪೂರ್ವಕವಾಗಿ ಅಕ್ಬರನ ರಾಣಿಯರು ಮತ್ತು ಸ್ನೇಹಿತರೊಂದಿಗೆ ಕೊಟ್ಟೂರಿಗೆ ತಂದು ಬಸವೇಶ್ವರನಿಗೆ ಅರ್ಪಿಸಿದರೆಂದೂ; ಅದು ಇಂದಿಗೂ ಕೊಟ್ಟೂರೇಶ್ವರ ಮಠದಲ್ಲಿ ಇರುವುದಾಗಿ ಸ್ಥಳ ಐತಿಹ್ಯವಿದೆ.

ಕೊಟ್ಟೂರು ಬಸವನ ಕಾಲಕ್ಕೆ ಆ ಊರು ಹರಪನಹಳ್ಳಿಯ ಪಾಳೇಗಾರರ ಆಡಳಿತಕ್ಕೆ ಒಳಪಟ್ಟಿತ್ತು. ಅದನ್ನು ಆಗ ಸೋಮಶೇಖರ ರಾಜನು ಆಳುತ್ತಿದ್ದನು. ಒಮ್ಮೆ ಚಿತ್ರದುರ್ಗದ ಪಾಳೇಗಾರನಾಗಿದ್ದ ಸಿದ್ದೋಜಿ ಮುರಾರಿಯು ಕೊಟ್ಟೂರಿನ ಮೇಲೆ ಡಂಡೆತ್ತಿ ಬಂದಾಗ, ಅವನನ್ನು ಎದುರಿಸಲಾಗದೆ ಹರಪನಹಳ್ಳಿಯ ಪಾಳೆಗಾರ ಸೋಮಶೇಖರ ರಾಜನು ರಾಜ್ಯ ರಕ್ಷಣೆಗಾಗಿ ಗುರು ಬಸವೇಶ್ವರನ ಮೊರೆ ಹೋಗುತ್ತಾನೆಂದೂ; ಈ ಕಾರಣದಿಂದ ಚಿತ್ರದುರ್ಗದ ಪಾಳೇಗಾರನು ಕೊಟ್ಟೂರು ಯುದ್ಧವನ್ನು ಕೈಬಿಟ್ಟು, ಶ್ರೀ ಗುರು ಬಸವೇಶನ ದರ್ಶನ–ವಿಸ್ಮಯಗಳಿಗೆ ಬೆರಗಾಗಿ ಮರಳಿ ಹೋದರೆಂದು ಅಲ್ಲಿನ ಜನಪದ ಐತಿಹ್ಯಗಳು ನಿರೂಪಿಸುತ್ತವೆ.

ಕೊಟ್ಟೂರು ಬಸವನ ಮಠದ ಆವರಣದಲ್ಲಿ ಇಂದಿಗೂ 'ಗಚ್ಚಿನಮಠ'ವೆಂಬ ಇನ್ನೊಂದು ಮಠವಿರುವುದಾಗಿ ತಿಳಿದುಬರುತ್ತದೆ. ಎಮ್ಮೆ ಬಸವನ ಕಾಲಜ್ಞಾನವೊಂದರಲ್ಲಿ ಬರುವ–

***"ಗಚ್ಚಿನ ಮಠದೊಳು ಹೆಚ್ಚಿನ ಹುಲಿ ಬಂದು ದುಮ್ಮಿಸಾಲಿಯೊ ।***
***ನಾಚಿಕೆಯಾಯಿತೆಂದು ಬೆಚ್ಚಗೆ ಮಲಗಿತು ದುಮ್ಮಿಸಾಲಿಯೊ ॥"***[17]

ಎಂಬ ಸಾಲುಗಳಲ್ಲಿ 'ಗಚ್ಚಿನಮಠ'ದ ಉಲ್ಲೇಖವಿರುವುದರಿಂದ, ಎಮ್ಮೆ ಬಸವನಿಗೂ ಕೊಟ್ಟೂರಿಗೂ ಯಾವುದೋ ರೀತಿಯ ಸಂಬಂಧವಿರುವಂತೆ ತೋರುತ್ತದೆ. ಪ್ರಸ್ತುತ ವೀರಶೈವ ಪಂಚಗಣಾಧೀಶ್ವರರಲ್ಲಿ ಕೊಟ್ಟೂರು ಬಸವೇಶ್ವರನು ಒಬ್ಬನೆಂದು ಹೇಳುವಲ್ಲಿ, ಎಮ್ಮೆ ಬಸವನೇ ಇಲ್ಲಿ ಕೆಲಕಾಲವಿದ್ದು ಕೊಟ್ಟೂರು ಬಸವನೆಂದು ಹೆಸರು ಪಡೆದಿರುವನೋ ಹೇಗೊ ಎಂಬುದರ ಬಗೆಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಸುವ ಅಗತ್ಯವಿದೆ ಎನ್ನಬಹುದು.

ಎಮ್ಮೆ ಬಸವನಿಗೂ ಕೊಟ್ಟೂರು ಬಸವನಿಗೂ ದಾರ್ಶನಿಕ ಸಂಬಂಧವಿರುವುದನ್ನು ಮಾತ್ರ ಅಲ್ಲಗಳೆಯಲಾಗದು. ಎಮ್ಮೆ ಬಸವನ ಸಂಪರ್ಕ ಕೊಟ್ಟೂರಿನೊಂದಿಗೆ ಇತ್ತೆಂಬುದಕ್ಕೆ ಅವನ ಕಾಲಜ್ಞಾನದಲ್ಲಿ ಬರುವ 'ಕೊಟ್ಟೂರು ಬಸವ' ಮತ್ತು 'ಗಚ್ಚಿನಮಠ'ದ ಉಲ್ಲೇಖಗಳು ಪ್ರಮುಖ ಸಾಕ್ಷಿಯಾಗುತ್ತವೆ.

ಅನಂತರ ಎಮ್ಮೆ ಬಸವನು ವಿಜಯನಗರದ ಹಂಪೆಯ ಪ್ರದೇಶಕ್ಕೆ ಬರುತ್ತಾನೆ. ಹಂಪೆಯ ಪರಿಸರದಲ್ಲಿ ಉಪಲಬ್ಧವಾಗಿರುವ ಅಕರ ಸಾಮಾಗ್ರಿಗಳನ್ನು ಕುರಿತು ಡಾ.ಎಫ್.ಟಿ.ಹಳ್ಳಿಕೇರಿಯವರು ಚಾರಿತ್ರಿಕ ದಾಖಲೆಗಳೊಂದಿಗೆ ವಿವೇಚಿಸಿದ್ದಾರೆ.[18] ತಿರುಮಲರಾಯನು ದತ್ತಿಯಾಗಿ ನೀಡಿದ 'ಕೊಮರುಕೆರೆ' ಮತ್ತು ಹೊಸಪೇಟೆ, ಕೊಂಚಿಗೇರಿ, ಕುಡತಿನಿ ಎಂಬ ಊರುಗಳಲ್ಲಿ ಎಮ್ಮೆ ಬಸವನ ಹೆಸರಿನ ಕೆಲವು ಸ್ಮಾರಕಗಳಿವೆ. ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನ ಕೊಂಚಿಗೇರಿ ಗ್ರಾಮವೇ ಪ್ರಾಚೀನ 'ಕೊಮರುಕೇರೆ' ಎಂದು ಗುರುತಿಸಲಾಗಿದ್ದು, ಅಲ್ಲಿ ಎಮ್ಮೆ ಬಸವನದೆಂದು ಹೇಳಲಾಗುವ ಗದ್ದಿಗೆ, ಜಂಬುಕೇಶ್ವರ ದೇವಾಲಯಗಳೂ ಇರುವುದು ತಿಳಿದುಬರುತ್ತದೆ.[19] ಕೊಂಚಿಗೇರಿಯಲ್ಲಿ ಈಗಲೂ 'ಎಮ್ಮೆ ಬಸವ' ಹೆಸರಿನ ಜನರಿದ್ದಾರೆಂಬ ಅಂಶವು ಆ ಊರಿನ ಜನರಲ್ಲಿರುವ ಎಮ್ಮೆ ಬಸವನ ಚಾರಿತ್ರಿಕ ಪ್ರಜ್ಞೆಯನ್ನು, ತನ್ನ ಮಹಿಮಾನ್ವಿತ ವ್ಯಕ್ತಿತ್ವವನ್ನುತೋರಿ, ಜನಮನದಲ್ಲಿ ಶಿವಭಕ್ತಿಯ ಮಹತ್ವವನ್ನು ಸಾರುತ್ತ ಎಮ್ಮೆ ಬಸವನು ಕೆಲಕಾಲ ಅಲ್ಲಿ ನೆಲೆಗೊಂಡಿದ್ದನೆಂಬುದನ್ನು ಸೂಚಿಸುತ್ತದೆ. 'ಸತ್ತ ಎಮ್ಮೆಯನ್ನು ಬದುಕಿಸಿದ ಪವಾಡ'ದ ಅಭಿವ್ಯಕ್ತಿ ಅಲ್ಲಿನ ಜನರಲ್ಲಿ ಇರುವುದು ಎಮ್ಮೆ ಬಸವನ ದಾರ್ಶನಿಕ ಶಕ್ತಿಯ ಸಂಕೇತವಾಗಿದೆ.[20] ಕವಿ ಸಿದ್ದನಂಜೇಶನು ತನ್ನ 'ಗುರುರಾಜ ಚಾರಿತ್ರ'ದಲ್ಲಿ–

***"ಎಮ್ಮೆಗಳ ಜಂಗುಳಿಯ ಕಾಯುತ್ತ ಬಸವಯ್ಯ***
***ನುಮ್ಮಾಹದಿಂದಿರಲು ಜಂಬುನಾಥಂವೊಲಿದು"[21]***

ಎಂದು ಹೇಳಿರುವಲ್ಲಿ ಎಮ್ಮೆ ಬಸವನು ಕೆಲಕಾಲ ಎಮ್ಮೆಯ ಹಿಂಡುಗಳನ್ನು ಕಾಯುತ್ತ ಜಂಬುಲಿಂಗನನ್ನು ಭಕ್ತಿಯನ್ನು ಆಚರಿಸುತ್ತಿದ್ದುದನ್ನು ಅರುಹುತ್ತಿದೆ. ಪ್ರಾಯಶಃ ಕುಂಭಕೋಣವನ್ನು ತೊರೆದು ಹಂಪೆಯ ಪರಿಸರಕ್ಕೆ ಬಂದ ಮೇಲೆ ಕೆಲಕಾಲ ಎಮ್ಮೆಗಳ ಹಿಂಡನ್ನು ಕಾಯುವ ಕಾಯಕವನ್ನು ಕೈಕೊಂಡಿರುವಂತೆ ತೋರುತ್ತದೆ. ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯದಲ್ಲಿ ಬರುವ–

***"ತೊತ್ತಿನ ಮಕ್ಕಳು ಕಟ್ಟೆಯನೇರ್ಯಾರು ಹುಯ್ಯಲೊ ಡಂಗುರವ । ಅಯ್ಯ***
***ಗರತಿಯ ಮಕ್ಕಳು ದನಗಳ ಕಾಯ್ದರು ಹುಯ್ಯಲೊ ಡಂಗುರವ ॥"[22]***

ಎನ್ನುವಲ್ಲಿ 'ಗರತಿಯ ಮಕ್ಕಳು ದನಗಳ ಕಾಯ್ದರು' ಎಂಬ ವಿವೇಚನೆಯು ಆತ ದನ ಕಾಯ್ದ ಪ್ರಸಂಗವನ್ನು ಅಭಿವ್ಯಕ್ತಿಸಿರುವಂತಿದೆ.

ಈ ರೀತಿ ಕುಂಭಕೋಣ ಮೂಲದ ಜಂಬುನಾಥನ ಪರಮಭಕ್ತನಾದ ಎಮ್ಮೆ ಬಸವನು ಮೇಲೆ ವಿವೇಚಿಸಿದ ಘಟನೆಯ ಮೂಲಕ ಧಾರ್ಮಿಕ ಅಧಿಕಾರವನ್ನೂ, ಕುಂಭಕೋಣವನ್ನೂ ಅನಿವಾರ್ಯವಾಗಿ ತೊರೆದು ಮೈಸೂರು ಸೀಮೆಯ ಮೂಲಕ ಕೊಟ್ಟೂರು, ವಿಜಯನಗರ (ಕಂಪಿ), ಕಂಚಿಗೇರಿ ಮುಂತಾದ ಪ್ರದೇಶಗಳಲ್ಲಿ ಸಂಚರಿಸುತ್ತಾನೆ. ಈತನ ಕಾಲಜ್ಞಾನದಲ್ಲಿ ಉಲ್ಲೇಖಗೊಂಡಿರುವ ಕೊಡೇಕಲ್ಲ ಬಸವ, ಬಾಬೂಜಿ (ಯಾರೆಂದು ತಿಳಿಯದು), ಅಲ್ಲಮ, ಚೆನ್ನಬಸವಣ್ಣ ಮುಂತಾದ ಕೊಡೇಕಲ್ಲ ಸಂಪ್ರದಾಯದ ಶರಣರ ಸಾಂಕೇತಿಕ ಉಲ್ಲೇಖಗಳಿವೆ. "ಮರಗಳ ಕಡಿವುತ ಮಾಯದ ಕೊಡಲೆವರು ತಿರುಗುತ ಬರತಾರಣ್ಣ"[23] ಎಂಬ ಈತನ ಕಾಲಜ್ಞಾನದ ಸಾಲು ಮಾಯದ ಕೊಡಲೆಯ ಅವತಾರ

ಪುರುಷನಾದ ತಿಂಥಿಣಿ ಮೌನೇಶ್ವರನನ್ನು ಉಲ್ಲೇಖಿಸಿರುವಂತಿದೆ. ತಿಂಥಿಣಿ ಮೌನೇಶ್ವರನ ವಚನಗಳಲ್ಲಿ ಎಮ್ಮೆ ಬಸವಣ್ಣನ ಉಲ್ಲೇಖವಿರುವುದನ್ನು ಅರಿಯಬಹುದು.

*"ಹಿರಿಯ ಅಂಕುಶಕಾನ ಸತ್ತಂದಿನಮಾತು*
*ಎಮ್ಮೆ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣನು ಡಂಗುರವ*
*ಸಾರಬೇಕೆಂದು ಚನ್ನಬಸವಣ್ಣ ಬಂದೀನಿ ಕಾಣಿರೊ"*[24]

ಎಂಬ ವಚನದಲ್ಲಿ ತಿಂಥಿಣಿ ಮೋನಪ್ಪಯ್ಯನು ತನ್ನನ್ನು ಚನ್ನಬಸವಣ್ಣನೆಂದು ಹೇಳಿಕೊಳ್ಳುತ್ತ, 'ಎಮ್ಮೆ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ'ನೆಂದು ಹೇಳುವಲ್ಲಿ ಪ್ರಾಯಶಃ ಕೊಡೇಕಲ್ಲ ಬಸವಣ್ಣನನ್ನೇ ಇಮ್ಮಡಿ ಬಸವಣ್ಣ ಎಂದಿರುವಂತೆ ತೋರುತ್ತದೆ. ಕೊಡೇಕಲ್ಲ ಬಸವಣ್ಣನ ಶರಣ ಪರಂಪರೆಯಲ್ಲಿ ನಾಲ್ಕು ಮುಖ್ಯವಾದ ಸಾಂಕೇತಿಕ ಶಾಖೆಗಳಿವೆಯೆಂದು ಗುರುತಿಸಿ ಹೇಳಲಾಗುತ್ತದೆ. ಎತ್ತು, ಎಮ್ಮೆ, ಕತ್ತೆ, ಮತ್ತು ಕುದುರೆ–ಎಂದು ಅವುಗಳನ್ನು ಸೂಚಿಸಲಾಗುತ್ತದೆ. ಇಲ್ಲಿ ಬರುವ 'ಎಮ್ಮೆಯವರ ಶಾಖೆಯವರು ಎಮ್ಮೆ ಬಸವಣ್ಣನ ಅನುಯಾಯಿಗಳೆಂದು' ಪರಿಗಣಿಸಲಾಗುತ್ತದೆ.

*"ಎತ್ತಿನವರು ಎಮ್ಮೆಯವರು ಕತ್ತೆಯವರು ಕುದುರೆಯವರು*
*ಉತ್ಪೈಸಿದಂಥ ವಚನವು ಹೊತ್ತಿಗೆಯೊಳಗೆ ಇದ್ದವು*
*ಅವರ ತೊತ್ತಿನ ಮಗನು ಉತ್ಪೈಸಿದ ವಚನವು*
*ತುತ್ತು ನುಂಗುವಷ್ಟಕ್ಕೆ ಕತ್ತಿಗೆ ಹಿಡಿವುತ್ತಿವೆ ಬಸವಣ್ಣ"*[25]

ಎಂಬ ಮೋನಪ್ಪಯ್ಯನ ಈ ವಚನದಲ್ಲಿ ಉಲ್ಲೇಖಿಸಲಾದ ಎತ್ತು, ಎಮ್ಮೆ, ಕತ್ತೆ ಮತ್ತು ಕುದುರೆ–ಇವು ಕ್ರಮವಾಗಿ ದಿಗ್ಗಿ ಸಂಗನಾಥ, ಎಮ್ಮೆ ಬಸವ, ನಾಗಾವಿ ಈರಪ್ಪಯ್ಯ ಮತ್ತು ಕೊಡೇಕಲ್ಲ ಬಸವಣ್ಣನವರ ಉಪಶಾಖೆಗಳ ಸಾಂಕೇತಿಕ ಹೆಸರುಗಳಾಗಿವೆ. ಈ ಕುರಿತು ಸಾಕಷ್ಟು ಸ್ಪಷ್ಟವಾದ ಜ್ಞಾನವನ್ನು ತಿಂಥಿಣಿ ಮೌನೇಶ್ವರನು ಹೊಂದಿದ್ದನು. ಮೋನಪ್ಪಯ್ಯನ ವಚನಗಳ ಅಂಕಿತ 'ಬಸವಣ್ಣ' ಎಂದಿರುವುದು ಕೊಡೇಕಲ್ಲ ಬಸವಣ್ಣನ ಸಂಕೇತವೆಂದು ಪರಿಭಾವಿಸಲಾಗಿದೆ. ಅದಕ್ಕೆ ಖಚಿತವಾದ ಆಧಾರಗಳಿಲ್ಲ. 'ಎಮ್ಮೆ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ' ಎಂದು ಉಲ್ಲೇಖಿಸುವ ಮೋನಪ್ಪಯ್ಯನ ವಚನದ ಅಂಕಿತವು 'ಎಮ್ಮೆ ಬಸವ'ನ ಸಂಕೇತವಾಗಿರುವಂತೆ ತೋರುತ್ತದೆ. ಎಮ್ಮೆ ಬಸವನು ಈ ಪರಂಪರೆಯಲ್ಲಿ ಕೊಡೇಕಲ್ಲ ಬಸವಣ್ಣನಿಗಿಂತ ಹಿರಿಯವನಾಗಿರುವುದು ಕೂಡ ಇಲ್ಲಿ ಮುಖ್ಯವಾಗುತ್ತದೆ. ಒಟ್ಟಿನಲ್ಲಿ ಕೊಡೇಕಲ್ಲ ಪರಿವಾರದ ಶರಣರು ಮತ್ತು ಎಮ್ಮೆ ಬಸವಣ್ಣ ಒಂದೇ ಶರಣ ಸಂಘಟನೆಗೆ ಸಂಬಂಧಿಸಿದ ಧಾರ್ಮಿಕ ನಾಯಕರೆಂದು ಹೇಳಬಹುದು. ಎಮ್ಮೆ ಬಸವನು ಯಾವಾಗ, ಎಲ್ಲಿ ಲಿಂಗೈಕ್ಯನಾದನೆಂಬುದಕ್ಕೆ ಖಚಿತ ಆಧಾರಗಳಿಲ್ಲ; ಸದ್ಯಕ್ಕೆ ಡಾ.ಎಫ್.ಟಿ.ಹಳ್ಳಿಕೇರಿಯವರು ವಿವೇಚಿಸಿ ಸೂಚಿಸಿರುವ 'ಕೊಮರುಕೆರೆ'ಯ ಸಮಾಧಿ ಸ್ಥಳವೇ ಆತನ ಲಿಂಗೈಕ್ಯ ಸ್ಥಳವೆಂದು ಪರಿಭಾವಿಸಬಹುದು.

**ಎಮ್ಮೆ ಬಸವನ ಕಾಲನಿರ್ಣಯ**

ಎಮ್ಮೆ ಬಸವನ ಕಾಲ ವಿಚಾರವನ್ನು ಕುರಿತು ವಿದ್ವಾಂಸರಾದ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು, ಆರ್.ನರಸಿಂಹಾಚಾರ್ಯ, ಡಾ.ಎಂ.ಎಂ.ಕಲಬುರ್ಗಿ, ಡಾ.ವ್ಹಿ.ಶಿವಾನಂದ, ಡಾ.ಹಂಪ ನಾಗಾರಾಜಯ್ಯ ಮುಂತಾದವರು ಈತನ ಕಾಲ ಕ್ರಿ.ಶ.1543 ಎಂದು ಊಹಿಸಿರುವುದನ್ನು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟದಲ್ಲಿ ಸೂಚಿಸಲಾದ ಕ್ರಿ.ಶ.1543ರ ವರ್ಷವನ್ನು ಎಮ್ಮೆ ಬಸವನ ಕಾಲವೆಂದು ಬಗೆದಿರುವುದನ್ನು

ಡಾ.ಎಫ್.ಟಿ.ಹಳ್ಳಿಕೇರಿಯವರು ಉಲ್ಲೆಖಿಸಿದ್ದಾರೆ.[26] ಅಲ್ಲದೆ, "ಎಮ್ಮೆ ಬಸವನು ವಿಜಯನಗರದ ಅರಸರಾದ ವೀರನರಸಿಂಹ, ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯರ ಆಳ್ವಿಕೆಯ ಸಮಯದಲ್ಲಿದ್ದು, 16ನೆಯ ಶತಮಾನದ ಪ್ರಾರಂಭದಿಂದ ಕೊನೆಯ ಭಾಗದವರೆಗೂ ಇದ್ದನೆಂದು ಹೇಳಬೇಕಾಗುತ್ತದೆ"[27] ಎಂದಿದ್ದಾರೆ. ಇಲ್ಲಿ ಡಾ.ಎಂ.ಎಂ.ಕಲಬುರ್ಗಿ ಮತ್ತು ಇತರ ವಿದ್ವಾಂಸರು ಎಮ್ಮೆ ಬಸವನ ಕಾಲ ಕ್ರಿ.ಶ.1543 ಎಂದು ಉಲ್ಲೇಖಿಸಿರುವುದಕ್ಕೆ ಮುಖ್ಯವಾದ ಆಧಾರವೆಂದರೆ, ಎಮ್ಮೆ ಬಸವನಿಗೆ ಗ್ರಾಮ ದಾನ ನೀಡಿದ ವಿಷಯವನ್ನು ತಿಳಿಸುವ ನಂಜನಗೂಡಿನ ತಾಮ್ರ ಶಾಸನದ ಕಾಲವಾಗಿದೆ. ಡಾ.ಹಳ್ಳಿಕೇರಿಯವರು ಎಮ್ಮೆ ಬಸವನ ಕಾಲ ಕ್ರಿ.ಶ.16ನೆಯ ಶತಮಾನದ ಆದಿಯಿಂದ ಅಂತ್ಯದವರೆಗೆ ಎಂದು ಊಹಿಸಿರುವುದಕ್ಕೆ ಎಮ್ಮೆ ಬಸವ ತನ್ನ ಕಾಲಜ್ಞಾನ ಸಾಹಿತ್ಯದಲ್ಲಿ ಉಲ್ಲೇಖಿಸಿರುವ ವಿಜಯನಗರದ ದೊರೆಗಳ ಉಲ್ಲೇಖಗಳೇ ಆಧಾರಗಳಾಗಿವೆ.

ಎಮ್ಮೆ ಬಸವನಿಗೆ ದಾನ ನೀಡಿದ ಶಾಸನದ ಕಾಲ ಕ್ರಿ.ಶ.1543; ಈ ವೇಳೆಗಾಗಲೇ ಆತ ಪ್ರಸಿದ್ಧ ವೀರಶೈವ ಶರಣನೆಂದು ರಾಜಮನ್ನಣೆ ಗಳಿಸಿದ್ದನ್ನು ಶಾಸನ ತಿಳಿಸುತ್ತದೆ. ಅದಾದ ನಂತರದಲ್ಲಿ ಕುಂಬಕೋಣದಲ್ಲಿ ಧಾರ್ಮಿಕ ಪಣವಾದದ ಘಟನೆ ನಡೆದು ಲಿಂಗರಾಜೇಂದ್ರ (ಎಮ್ಮೆ ಬಸವ)ನು ಕುಂಭಕೋಣವನ್ನು ತೊರೆಯುತ್ತಾನೆ. ಈ ಘಟನೆಯ ಕಾಲ ಸ್ಪಷ್ಟವಾಗಿಲ್ಲ. ಪ್ರಾಯಶಃ ಈ ಘಟನೆ ಕ್ರಿ.ಶ.ಸು.1545ರಲ್ಲಿ ನಡೆದಿರುವಂತೆ ತೋರುತ್ತದೆ. ಕುಂಭಕೋಣಕ್ಕೆ ಶ್ರೀವಿಜಯೀಂದ್ರರನ್ನು ಆಹ್ವಾನಿಸಿದ ಸ್ಥಳೀಯ ವಿಪ್ರರು "ಕುಂಭಕೋಣದಲ್ಲಿ ಹತ್ತಿಪ್ಪತ್ತು ವರ್ಷಗಳಿಂದ ಮಹಾಪ್ರಬಲರಾದ ಶೈವ ಸನ್ಯಾಸಿಗಳೊಬ್ಬರು ತಮ್ಮ ಪಾಂಡಿತ್ಯ ಮಂತ್ರವಿದ್ಯೆಗಳ ಪ್ರಭಾವದಿಂದ ದೇವಾಲಯಾಧಿಪತ್ಯವನ್ನು ವಹಿಸಿ ವಿಪ್ರರನ್ನೆಲ್ಲಾ ಶೈವರನ್ನಾಗಿ ಮಾಡುತ್ತಿದ್ದರು"[28] ಎಂದು ಆಪಾದಿಸುವ ವಿವರ ಲಭಿಸುತ್ತದೆ. ಈ ಆಧಾರವನ್ನು ಪರಿಗಣಿಸಿದರೆ ಪ್ರಾಯಶಃ ಎಮ್ಮೆ ಬಸವ ಬಿರುದಾಂಕಿತರ ಜನನ ಕಾಲ ಕ್ರಿ.ಶ.1500 ಎಂದು ಪರಿಗಣಿಸಲು ಅವಕಾಶವಿದೆ.

ಎಮ್ಮೆಯ ಬಸವನ ಕಾಲಜ್ಞಾನದಲ್ಲಿನ

***"ಸೀರ್‍ಯದ ರಂಗನ ಶಿರವಾನು ಕೊಯ್ವಾರು ಕೂ ಕೂ ಕೂ ।***

***ತೋರಣವ ಕಟ್ಯಾರು ಬಾಗಿಲಿಗೆ ಕೂ ಕೂ ಕೂ ॥"***

ಎಂಬ ಸಾಂಕೇತಿಕ ಅಭಿವ್ಯಕ್ತಿಯಲ್ಲಿ ಪ್ರಾಯಶಃ ವಿಜಯನಗರದ ದೊರೆ ಶ್ರೀರಂಗನ ದಾನವನ್ನು ಸೂಚಿಸಿರುವಂತೆ ತೋರುತ್ತದೆ. ವಿಜಯಯನಗರವನ್ನಾಳಿದ ಅರವೀಡು ವಂಶದ ತಿರುಮಲನ ಮರಣದ ನಂತರ ಅಧಿಕಾರಕ್ಕೆ ಬಂದ ಶ್ರೀರಂಗನು ಕ್ರಿ.ಶ.1586ರವರೆಗೆ ರಾಜ್ಯವನ್ನಾಳಿದ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ.[29] ಶ್ರೀತಂಗ ಯಾವಾಗ, ಎಲ್ಲಿ, ಹೇಗೆ ತೀರಿದನೆಂಬ ವಿಸಯ ಇತಿಹಾಸದಲ್ಲಿ ಲಭಿಸುವುದಿಲ್ಲ. ಎಮ್ಮೆ ಬಸವನು ಕ್ರಿ.ಶ.1586ರ ನಂತರ ಬದುಕಿದ್ದನೆಂದು ಇದರಿಂದ ತಿಳಿದುಬರುತ್ತದೆ. ಈತ ಯಾವಾಗ, ಎಲ್ಲಿ ಲಿಂಗೈಕ್ಯನಾದನೆಂಬುದು ಖಚಿತವಾಗಿ ತಿಳಿಯುವುದಿಲ್ಲ.

**ಕ್ರಾಂತಿಕಾರಿ ಮಹಿಮಾ ಪುರುಷ**

ಎಮ್ಮೆ ಬಸವನ ಕಾಲಕ್ಕಾಗಲೇ ವೈದಿಕಧರ್ಮಗುರುಗಳು ವಿಜಯನಗರದಂತಹ ಬಲ್ಯಾಢ್ಯ ರಾಜಮನೆತನಗಳು ಮತ್ತು ಸಾಮಂತರಿಗೆ ರಾಜಗುರುಗಳಾಗಿ ಪೂಜ್ಯನೀಯವೆನಿಸಿದ್ದರು. ಈ ಪ್ರಭಾವವನ್ನು ಬಳಸಿಕೊಂಡು ರಾಜರು ವೈದಿಕಧರ್ಮವನ್ನು ಬೆಂಬಲಿಸುವಂತೆ ಪ್ರೇರೇಪಿಸಿದ್ದಂತೆ ತೋರುತ್ತದೆ. ಶ್ರೀ ವಿಜಯೀಂದ್ರರಂತಹ ವೈದಿಕಧರ್ಮಗುರುಗಳು ಲಿಂಗರಾಜೇಂದ್ರರಂತಹ ವೀರಶೈವ ಮಠಾಧೀಶರನ್ನು ಧಾರ್ಮಿಕ ಪಂಥವಾದಕ್ಕೆ ಆಹ್ವಾನಿಸಿರಬೇಕಾದರೆ ಅದರ ಹಿಂದೆ ಪರೋಕ್ಷವಾದ

ಅರಸೊತ್ತಿಗೆಯ ಬೆಂಬಲ ಇರುವುದು ಎದ್ದು ಕಾಣುತ್ತದೆ. ತಂಜಾವೂರ ಚೆವ್ವಪ್ಪನಾಯಕನ ಸಮಕ್ಷಮದಲ್ಲಿ ಧಾರ್ಮಿಕ ಕೇಂದ್ರಗಳನ್ನು, ಧರ್ಮದ ಅಸ್ತಿತ್ವವನ್ನು ಸೋಲು–ಗೆಲುವಿನ ಪಣಕ್ಕಿಟ್ಟು ಪಂಥವಾದ ನಡೆದಿರುವುದು; ವೀರಶೈವಧರ್ಮದ ಲಿಂಗರಾಜ ಪರಾಜಿತನೆಂದು ಮಧ್ಯಸ್ಥಗಾರರು ತೀರ್ಪುನೀಡುವುದು–ಇವೆಲ್ಲ ಸಮಕಾಲೀನ ವೀರಶೈವರನ್ನು ಅವರ ಮೂಲಸ್ಥಳಗಳಿಂದ ಪಲ್ಲಟಗೊಳಿಸುವ, ಆ ಧರ್ಮವನ್ನು ಅತಂತ್ರಗೊಳಿಸುವ ದೃಷ್ಟಿಯಿಂದಲೇ ಹೆಣೆದ ತಂತ್ರಗಳಾಗಿ ತೋರುತ್ತದೆ. ವಿಜಯನಗರದ ಅರಸರು ಮತ್ತು ಚೆವ್ವಪ್ಪನಾಯಕನ ಕುತಂತ್ರವೇ ವೈದಿಕರೊಂದಿಗೆ ವಾದ ಮಾಡಿಸುವ ಒತ್ತಡಕ್ಕೆ ಸಿಲುಕಿಸಿದ ಬಗೆಗೆ 'ಎಮ್ಮೆ ಬಸವ' ಬಿರುದಿನ ಲಿಂಗರಾಜೇಂದ್ರರಿಗೆ ಅರಿವು ಮೂಡಿಸುತ್ತದೆ. ಕುಂಭಕೋಣದ ಮಠಮಾನ್ಯವನ್ನು ತೊರೆದು ದೇಶಾಂತರ ತಿರುಗುತ್ತ ವಿಜಯನಗರಕ್ಕೆ ಬಂದ ಎಮ್ಮೆ ಬಸವನು ಕೆಲಕಾಲ ಅಲ್ಲಿಯೇ ನೆಲೆಸಿರುತ್ತಾನೆ. ಶರಣಧರ್ಮಕ್ಕೆ ಅನ್ಯಾಯವೆಸಗಿದ ವಿಜಯನಗರದ ದೊರೆಗಳಿಗೆ ಕೇಡು ಬರುವುದೆಂದು ತಿಳಿಸುತ್ತ ಘಂಟಾಘೋಷವಾಗಿ ಕಾಲಜ್ಞಾನ ನುಡಿಯುತ್ತಿರುತ್ತಾನೆ.

***"ನರಸಿಂಗರಾಯನ ಹಿರಿಯ ಕುಮಾರನು ಹುಯ್ಯಲೊ ಡಂಗುರವ । ಅಯ್ಯ***
***ಅರಸುತನಕಿನ್ನು ಕಡೆಗಾಲವಾದೀತು ಹುಯ್ಯಲೊ ಡಂಗುರವ ॥"[30]***
***"ಅಚ್ಯುತನ ವಂಶವು ಮೊದಲೆದ್ದು ಹೋದೀತು ಹಾಕೆಲೊ ಮುಂಡಿಗೆಯ । ಅವನ***
***ಬಚ್ಚಿಟ್ಟ ಭಾಗ್ಯವು ಬಯಲೆದ್ದು ಹೋಯಿತು ಹಾಕೆಲೊ ಮುಂಡಿಗೆಯ ॥"[31]***

ಎಂಬಂಥ ಅರಸರು, ಅರಸು ಮನೆತನಗಳು ನಾಶವಾಗಿ ಹೋಗವುದನ್ನು ಒಮ್ಮೆ ಜನಜಂಗುಳಿಯ ರಾಜಬೀದಿಯಲ್ಲಿ ಎಮ್ಮೆ ಬಸವಣ್ಣನ ಕಾಲಿಗೆ ಜುಂಜುರಿಯ ಹಾಕಿ ಮನೆಯ ಹೊಗಿಸಿ, ಬಾಗಿಲಿಗೆ ಬೀಗ ಮುದ್ರೆಯ ಹಾಕಿ ಸುತ್ತ ಕಾವಲನಿಟ್ಟು ಇರಲಾಗಿ, ಆ ಎಮ್ಮೆ ಬಸಪ್ಪನು ಮಾಯದಲ್ಲಿ ರಾಜಬೀದಿಗೆ ಬಯಲಿಗೆ ಬಯಲು ನಿರ್ಬಯಲು ಎಂದು ಸಾರುತ್ತಯಿದ್ದನು"[32] ಎಂಬ ವಿಷಯವನ್ನು ಗಮನಿಸಿದಾಗ, ಕೋಣೆಯೊಳಗೆ ಬೀಗಬಂಧಿಸಿ ಕಾವಲಿಟ್ಟರೂ ಮಾಯದಿಂದ ರಾಜಬೀದಿಗೆ ಬರುವ ಇಲ್ಲಿನ ಸಂಗತಿಯು ಎಮ್ಮೆ ಬಸವ ಕ್ರಾಂತಿಕಾರಿ ಮನೋಭಾವ ಮತ್ತು ಧಾರ್ಶನಿಕ ಮಹಿಮೆಯನ್ನು ತಿಳಿಸುತ್ತದೆ.

ಗುಡಿಗೋಪುರಗಳ ನಾಶ, ವೈದಿಕ ಹಗರಣಗಳ ಅಭಿವ್ಯಕ್ತಿ, ಅರಸರ ಅನ್ಯಾಯದ ವರ್ತನೆ, ಸಮಕಾಲಿನ ಸಾಮಾಜಿಕ ಅನೀತಿಗಳ ವಿಡಂಬನೆಯಂಥ ವಿಷಯಗಳನ್ನು ಎತ್ತಿಕೊಂಡು ಎಮ್ಮೆ ಬಸವನು ನಿರ್ಭೀತಿಯಿಂದ ರಾಜಬೀದಿಗಳಲ್ಲಿ, ಜನಜಂಗುಳಿಯ ಸ್ಥಳಗಳಲ್ಲಿ ಪರಿಣಾಮಕಾರಿಯಾಗಿ ಕಾಲಜ್ಞಾನದ ಹಾಡುಗಳ ಮೂಲಕ ಬಿತ್ತರಿಸುತ್ತಿದ್ದುದನ್ನು ಮಾತ್ರ ನಿಲ್ಲಿಸುವುದಿಲ್ಲ. ಇದರಿಂದ ಆಕ್ರೋಶಗೊಂಡ ಅರಸು ಕೃಷ್ಣರಾಯನು ಪಟ್ಟದಾನೆಯ ಕಾಲಿಗೆ ಬಸಪ್ಪನನ್ನು ಹಾಕಿ ತುಳಿಸಿ ಸಾಯಿಸಲು ಆಜ್ಞೆ ಮಾಡುತ್ತಾನೆ. ಸೇವಕರು ಹಾಗೆ ಮಾಡಲು ಹೋದಾಗ ಪಟ್ಟದಾನೆಯು ಎಮ್ಮೆ ಬಸಪ್ಪನನ್ನು ಎತ್ತಿ ಮಸ್ತಕದ ಮೇಲೆ ಕೂಡ್ರಿಸಿಕೊಂಡು ಗೌರವ ಸಲ್ಲಿಸುತ್ತದೆ.[33] ಎಮ್ಮೆ ಬಸವ ಮತ್ತೆ ಆನಂದದಿಂದ ಕಾಲಜ್ಞಾನ ಸಾರುತ್ತ ರಾಜಬೀದಿಗೆ ಬರುತ್ತಾನೆ. ಎಮ್ಮೆ ಬಸವನ ಕುರಿತಿರುವ ಈ ಸಂಗತಿಗಳು ಅವನ ಕ್ರಾಂತಿಕಾರಿ ಮನೋಜ್ಞಾನ ಮತ್ತು ಘನಮಹಿಮೆಯ ದ್ಯೋತಕಗಳಾಗಿವೆ.

**ಎಮ್ಮೆ ಬಸವನ ಸಾಹಿತ್ಯ**

ಎಮ್ಮೆ ಬಸವನು ಕಾಲಜ್ಞಾನವನ್ನು ರಚಿಸಿರುವ ಸಂಗತಿ ಸಿದ್ದನಂಜೇಶನ 'ಗುರುರಾಜಚಾರಿತ್ರ'ದಿಂದ ತಿಳಿದುಬರುತ್ತದೆ. ಡಾ.ಎಫ್.ಟಿ.ಹಳ್ಳಿಕೇರಿಯವರು ಸಂಪಾದಿಸಿರುವ 'ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ' ಎಂಬ ಕೃತಿಯು ಸಂಕಲನ ಕೃತಿಯಾಗಿದ್ದು, ಇದು ಎಮ್ಮೆ ಬಸವನ ಸಂಪೂರ್ಣವಾದ ಕಾಲಜ್ಞಾನದ

ಕೃತಿಯಲ್ಲ; ಅವು ಇನ್ನೂ ಹಸ್ತಪ್ರತಿಗಳಲ್ಲಿ ನೆಲದ ಮರೆಯ ನಿಧಾನದಂತೆ ಉಳದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಎಮ್ಮೆ ಬಸವನು ರಚಿಸಿರುವ 'ಬಿಲ್ಲಮರಾಯನ ಸಾಂಗತ್ಯ'ವೆಂಬ ಕೃತಿಯ ಹಸ್ತಪ್ರತಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಇರುವುದಾಗಿ ತಿಳಿದುಬರುತ್ತದೆ. ಈ ಕೃತಿಯ ಪ್ರತಿಯೊಂದು ಸಂಧಿಯ ಕೊನೆಯಲ್ಲಿ ಜಂಬುಲಿಂಗನ ಸ್ತುತಿ ಇರುವುದಕ್ಕಾಗಿ ಆ ಹಸ್ತಪ್ರತಿಯನ್ನು ಗಮನಿಸಿರುವ ಡಾ.ಹಳ್ಳಿಕೇರಿಯವರ ಅಭಿಪ್ರಾಯವಾಗಿದೆ.[30] ಈ ಬರೆದಿರಬಹುದಾದ ಇತರ ಕೃತಿಗಳ ಮಾಹಿತಿ ಉಪಲಬ್ಧವಿಲ್ಲ.

**ಉಪಸಂಹಾರ**

'ಎಮ್ಮೆ ಬಸವ'ನ ನಿಜನಾಮ, ಲಿಂಗರಾಜೇಂದ್ರನೆಂಬುದು, ಮೂಲಸ್ಥಳ ಕುಂಭಕೋಣವನ್ನು ತೊರೆದು ಬಂದ ಚಾರಿತ್ರಿಕ ಸಂದರ್ಭ, ಈತನ ಕಾಲಜ್ಞಾನದಲ್ಲಿ ಪ್ರಕಟವಾಗಿರುವ ಧಾರ್ಮಿಕ ಕ್ರಾಂತಿಯ ಮನೋಭಾವ ಮುಂತಾದ ಚಾರಿತ್ರಿಕ ಸಂಗತಿಗಳು ಪ್ರಸ್ತುತ ಈ ಲೇಖನದಲ್ಲಿ ಮೊದಲ ಬಾರಿಗೆ ತೆರೆದುಕೊಳ್ಳುತ್ತವೆ. ಎಮ್ಮೆ ಬಸವನ ಮತ್ತು ಕೊಡೇಕಲ್ಲ ಬಸವಣ್ಣನ ಪರಿಸರದ ಶರಣರು ಒಂದೇ ಸಮಯಾಚಾರದ ವೀರಶೈವ ಶರಣರು ಮತ್ತು ಕಾಲಜ್ಞಾನಿಗಳು ಎಂಬುದರಲ್ಲಿ ಸಂದೇಹವೇ ಉಳಿಯುವುದಿಲ್ಲ ಎಂಬುದು ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯವನ್ನು ತುಲನಾತ್ಮಕಗಾಗಿ ಸಂದೇಹವೇ ಉಳಿಯುವುದಿಲ್ಲ. ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯವನ್ನು ಕೊಡೇಕಲ್ಲ ಮತ್ತು ಅವನ ಪರಿವಾರದ ಶರಣರ ಸಾಹಿತ್ಯವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಇವರೆಲ್ಲ ಒಂದೇ ಪರಂಪರೆಯವರೆಂಬುದು ಸ್ಪಷ್ಟವಾಗುತ್ತದೆ. ಕೊಡೇಕಲ್ಲ ಶರಣ ಪರಿವಾರದಲ್ಲಿ ಕಂಡುಬರುವ ತಮಿಳುನಾಡಿನಿಂದ ಬಂದವರೆಂದು ಭಾವಿಸಲಾದ ಪರಮಾನಂದಪ್ರಭು ಮತ್ತು ಮಂಟೇಲಿಂಗ ಎಂಬ ಇಬ್ಬರನ್ನು ಈ ಹಿಂದೆ ವಿದ್ವಾಂಸರು ಗುರುತಿಸಿದ್ದರು. 'ಎಮ್ಮೆ ಬಸವ' ಬಿರುದಾಂಕಿತ ಲಿಂಗರಾಜೇಂದ್ರನು ಕೂಡ ತಮಿಳುನಾಡಿನಿಂದ ಬಂದಿರುವವನಾಗಿದ್ದಾನೆ. ಒಟ್ಟಿನಲ್ಲಿ ಎಮ್ಮೆ ಬಸವನು ಪ್ರಸಿದ್ದ ವೀರಶೈವ ಕಾಲಜ್ಞಾನಿ ಕವಿ ಎಂಬುದರಲ್ಲಿ ಸಂದೇಹವಿಲ್ಲ.

**ಕೊನೆಯ ಟಿಪ್ಪಣಿಗಳು**

1. ಹಳ್ಳಿಕೇರಿ ಎಫ್.ಟಿ. (ಸಂ.). (1999). ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ. ಪು.8,
2. ಶ್ರೀ ರಾಜಾ ಎಸ್. ಗುರುರಾಜಾಚಾರ್ಯ. (1970). ಅಜಯ್ಯ ವಿಜಯೀಂದ್ರರು. ಪು.71.
3. ಅದೇ, ಪು.71.
4. ಹಳ್ಳಿಕೇರಿ ಎಫ್.ಟಿ. (ಸಂ.). (1999). ಪೂರ್ವೋಕ್ತ. ಪು.62.
5. ಶ್ರೀ ರಾಜಾ ಎಸ್. ಗುರುರಾಜಾಚಾರ್ಯ. (1970). ಪೂರ್ವೋಕ್ತ. ಪು.18.
6. ಹಳ್ಳಿಕೇರಿ ಎಫ್.ಟಿ. (ಸಂ.). (1999). ಪೂರ್ವೋಕ್ತ., ಪು.5–8
7. ಅದೇ, ಪು.9.
8. ಅದೇ, ಪು.2.
9. ಅದೇ, ಪು.2.
10. ಶ್ರೀ ರಾಜಾ ಎಸ್. ಗುರುರಾಜಾಚಾರ್ಯ. (1970). ಪೂರ್ವೋಕ್ತ . ಪು.11.

11. ಅದೇ, ಪು.34–77.
12. ಹಳ್ಳಿಕೇರಿ ಎಫ್.ಟಿ. (ಸಂ.). (1999). ಪೂರ್ವೋಕ್ತ. ಪು.47.
13. ಅದೇ, ಪು.51, 1970.
14. ಅದೇ, ಪು.53.
15. ಅದೇ, ಪು.57.
16. ಅದೇ, ಪು.55.
17. ಅದೇ, ಪು.3.
18. ಅದೇ, ಪು.47.
19. ಅದೇ, ಪು.8–15.
20. ಅದೇ, ಪು.9
21. ಅದೇ, ಪು.8,
22. ಅದೇ, ಪು.62.
23. ಅದೇ, ಪು.4,
24. ಅದೇ, ಪು.52.
25. ಕಡಕೋಳ ಸಿ.ಬಿ. ಮತ್ತು ಕೆ.ಪಿ.ಈರಣ್ಣ (ಸಂ.). (1994). ತಿಂಥಿಣಿ ಮೌನೇಶ್ವರರ ವಚನಗಳು, ವಚನ ಸಂಖ್ಯೆ 3–48.
26. ಅದೇ, ವಚನ ಸಂಖ್ಯೆ 5–35,
27. ಹಳ್ಳಿಕೇರಿ ಎಫ್.ಟಿ. (ಸಂ.). (1999). ಪೂರ್ವೋಕ್ತ. ಪು.8–9.
28. ಅದೇ, ಪು.9,
29. ಶ್ರೀ ರಾಜಾ ಎಸ್. ಗುರುರಾಜಾಚಾರ್ಯ. (1970). ಪೂರ್ವೋಕ್ತ. ಪು.32.
30. ರಂಗಸ್ವಾಮಯ್ಯ ಜಿ. ಆರ್. (1994). ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು.268,
31. ಹಳ್ಳಿಕೇರಿ ಎಫ್.ಟಿ. (ಸಂ.). (1999). ಪೂರ್ವೋಕ್ತ. ಪು.13.
32. ಅದೇ, ಪು.7,
33. ಅದೇ, ಪು.18,
34. ಅದೇ, ಪು.5,

**ಪರಾಮರ್ಶನ ಕೃತಿಗಳು**


- ಕಲಬುರ್ಗಿ ಎಂ.ಎಂ. (1970). ಶಾಸನಗಳಲ್ಲಿ ಶಿವಶರಣರು. ಸಿರಿಗನ್ನಡ ಪ್ರಕಾಶನ.
- ಶ್ರೀ ರಾಜಾ ಎಸ್.ಗುರುರಾಜಾಚಾರ್ಯ. (1970). ಅಜಯ್ಯ ವಿಜಯೀಂದ್ರರು. ಶ್ರೀ ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ.

- ಹಳ್ಳಿಕೇರಿ ಎಫ್.ಟಿ. (ಸಂ.). (1999). ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀ.ಆರ್. ನರಸಿಂಹಾಚಾರ್ಯ. (1973). ಕರ್ಣಾಟಕ ಕವಿಚರಿತೆ–ಸಂ. 2. ಕನ್ನಡ ಸಾಹಿತ್ಯ ಪರಿಷತ್ತು.
- ಶ್ರೀ ಸಿ. ಬಿ. ಕಡಕೋಳ ಮತ್ತು ಶ್ರೀ ಕೆ.ಪಿ.ಈರಣ್ಣ (ಸಂ.). (1994). ತಿಂಥಿಣಿ ಮೌನೇಶ್ವರರ ವಚನಗಳು, ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ.
- ರಂಗಸ್ವಾಮಯ್ಯ. ಜಿ.ಆರ್. (1994). ಕರ್ನಾಟಕದ ಸಂಕ್ಷಿಪ್ತ ಇತಿಹಾಸ. ಅನಂತ ಪ್ರಕಾಶನ.